## ತೆಂಗಿನ ಗರಿಗಳಲ್ಲಿ ಬಿಳಿಯ ಚುಕ್ಕೆ | ರೋಗ ಭಯದಲ್ಲಿರುವ ಕೃಷಿಕರಿಗೆ ಸಲಹೆ

# ಆತಂಕಪಡುವ ಅಗತ್ಯವಿಲ್ಲ; ಯಾವುದೇ ರಾಸಾಯನಿಕ ಸಿಂಪಡಿಸದಿರಿ

Hosadiganatha dt. 23/12/17

ಕಾಸರಗೋಡು: ಕಳೆದ ಕೆಲವು ಸಮಯದಿಂದೀಚೆ ಕಾಸರಗೋಡು ಮತ್ತು ಸುತ್ತಮುತ್ತಲಿನ ಪ್ರದೇಶದ ತೆಂಗಿನ ಮರಗಳ ಗರಿಯಲ್ಲಿ ಕಂಡು ಬರುವ ಬಿಳಿಯ ಚುಕ್ಕೆಗಳ ಬಗ್ಗೆ ತೆಂಗು ಕೃಷಿಕರು ಆತಂಕ ಪಡಬೇಕಾದ ಅಗತ್ಯವಿಲ್ಲವೆಂದು ಕೇಂದ್ರೀಯ ತೋಟಗಾರಿಕಾ ಬೆಳೆಗಳ ಸಂಶೋಧನಾ ಕೇಂದ್ರ(ಸಿಪಿಸಿಆರ್‌ಐ)ದ ನಿರ್ದೇಶಕರು ಹೇಳಿದ್ದಾರೆ.

ತೆಂಗಿನ ಗರಿಗಳಲ್ಲಿ ಮಚ್ಚೆಯಾಕಾರದಲ್ಲಿ ಬಿಳಿಯ ಚುಕ್ಕೆಗಳು ವ್ಯಾಪಕವಾಗಿ ಕಂಡು ಬರುತ್ತಿದ್ದು, ಇದರಿಂದಾಗಿ ಕೃಷಿಕರು ಕಂಗಾಲಾಗಿದ್ದರು. ಇದು 'ಅಲೆಯುರೋಡಿಕ್ಸ್ ರೂಂಗಿಯೋಪೆರ್ ಕುಲಾಟಸ್ ಮಾರ್ಟಿನ್' ಎಂಬ ಕೀಟದ ಬಾಧೆಯಾಗಿದ್ದು, ಇದು ತೆಂಗು ಕೃಷಿಗೆ ಹಾನಿಕಾರಕವಲ್ಲವೆಂದು ಅವರು ತಿಳಿಸಿದ್ದಾರೆ.

ಕಾಸರಗೋಡು ಪ್ರೆಸ್‌ಕ್ಲಬ್‌ನಲ್ಲಿ ಶುಕ್ರವಾರ ಕರೆದ



ಸುದ್ದಿಗೋಷ್ಠಿಯಲ್ಲಿ ಈ ಬಗ್ಗೆ ಮಾತನಾಡಿದ ಅವರು, ಈ ರೋಗಕ್ಕೆ ಹೆದರಿ ಕೃಷಿಕರು ತೆಂಗಿಗೆ ಯಾವುದೇ ರೀತಿಯ ರಸಾಯನಿಕವನ್ನು ಸಿಂಪಡಿಸಬಾರದು ಎಂದು ಸಲಹೆ ನೀಡಿದ್ದಾರೆ.

ಇದಕ್ಕೂ ಮೊದಲು ದಕ್ಷಿಣ ಕೇರಳದಲ್ಲಿ ಈ ರೋಗವು ಕಂಡು ಬಂದಿದ್ದು, ಬಳಿಕ ಇದು ಕಾಸರಗೋಡಿನಲ್ಲಿ ಕಾಣಿಸಿಕೊಂಡಿದೆ. ಕೇರಳದ ದಕ್ಷಿಣ ಪ್ರದೇಶಗಳಲ್ಲಿ ಈ ರೋಗವು ಕಣ್ಮರೆಯಾಗಿದೆ. ಒಟ್ಟಿನಲ್ಲಿ ತೆಂಗು ಕೃಷಿಕರು ಇದರಿಂದಾಗಿ ಯಾವುದೇ ರೀತಿಯ ಭಯಪಡಬೇಕಾದ ಅಗತ್ಯವಿಲ್ಲವೆಂದು ಅವರು ತಿಳಿಸಿದ್ದಾರೆ.

ಜನವರಿ ತಿಂಗಳಲ್ಲಿ ಸಿಪಿಸಿಆರ್‌ಐಯಲ್ಲಿ ಬೃಹತ್ ಕಿಸಾನ್ ಮೇಳವು ಜರಗಲಿದೆ. ಇದರಲ್ಲಿ ವಿವಿಧ ಕೃಷಿಗಳ ಕುರಿತಾಗಿ ವಿಚಾರಗೋಷ್ಠಿ ನಡೆಯಲಿದೆ. ಕೃಷಿಕರು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ವಿನಂತಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಡಾ.ಪಿ.ಮುರಳೀಧರನ್, ಡಾ.ಪಿ.ಎಸ್.ಪ್ರತಿಭಾ ಉಪಸ್ಥಿತರಿದ್ದರು.

### ಬೇವಿನ ಎಣ್ಣೆಯನ್ನು ಸಿಂಪಡಿಸಿ

ಈ ತರದ ರೋಗವು ಸಣ್ಣ ತೆಂಗಿನ ಮರಗಳಲ್ಲಿ ಮತ್ತು ತೆಂಗಿನ ಗಿಡಗಳಲ್ಲಿ ಹೆಚ್ಚಾಗಿ ಕಂಡು ಬರುತ್ತದೆ. ಒಂದು ರೀತಿಯ ಹುಳವು ಇದರ ರೋಗಕಾರಕವಾಗಿದೆ. ಇದಕ್ಕೆ ಕೇವಲ ನೀರನ್ನು ಮಾತ್ರ ಸಿಂಪಡಿಸಿದರೆ ಸಾಕಾಗಬಹುದು. ಈ ರೋಗವು ತೆಂಗಿನ ಮರದಲ್ಲಿ ಪ್ರಾರಂಭದಲ್ಲಿ ಕಂಡು ಬಂದರೂ ಸ್ವಲ್ಪ ಸಮಯದ ಬಳಿಕ ಇದು ಕಣ್ಮರೆ ಯಾಗುತ್ತದೆ. ಇದರಿಂದಾಗಿ ತೆಂಗಿನ ಕಾಯಿಯ ಇಳುವರಿಗೆ ಯಾವುದೇ ರೀತಿಯ ತೊಂದರೆಯಾಗದು. ಇದಕ್ಕೆ ಪರಿಹಾರವಾಗಿ ಬೇವಿನ ಎಣ್ಣೆಯನ್ನು ತೆಂಗಿನ ಮಡಲಿಗೆ ಸಿಂಪಡಿಸಬಹುದು.